JANUARY 27, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

- ಗದಗ ಜಿಲ್ಲೆ, ಲಕ್ಕುಂಡಿ ಸ್ಮಾರಕಗಳು; ಯುನೆಸ್ಕೊ ವಿಶ್ವ ಪರಂಪರೆಯ, ತಾತ್ಕಾಲಿಕ ಪಟ್ಟಿಗೆ ಸೇರಿಸುವ, ಪ್ರಸ್ತಾವ.
- ರಾಜ್ಯದ 5 ಸಾವಿರ ಸರ್ಕಾರಿ ಶಾಲೆಗಳು, ಸ್ಮಾರ್ಟ್ ತರಗತಿಗಳ ಸೌಲಭ್ಯದ ಮೂಲಕ, ಮೇಲ್ದರ್ಜೆಗೆ.
- ಬೇಡ್ತಿ ಹಾಗೂ ವರದಾ ನದಿಗಳ, ಜೋಡಣೆ; ಹುಕ್ಕೇರಿಮಠದ ಶ್ರೀಗಳ ನೇತೃತ್ವದಲ್ಲಿ, ಹಾವೇರಿಯಿಂದ ಕೇಂದ್ರಕ್ಕೆ ನಿಯೋಗ.
- ಕಲಬುರಗಿ ಅಭಿವೃದ್ಧಿಗೆ, ದೇಶದಲ್ಲೇ ವಿನೂತನ, ಜನ ಸಹಭಾಗಿತ್ವದ, ನೆಕ್ಸ್ಟ್ ಫೌಂಡೇಶನ್, ಸ್ಥಾಪನೆ.

<><><>

ಈಗ ವಾರ್ತೆಗಳ ವಿವರ

<><><>

ಗದಗ ಜಿಲ್ಲೆ, ಲಕ್ಕುಂಡಿ ಗ್ರಾಮದ ಐತಿಹಾಸಿಕ ಸ್ಮಾರಕಗಳನ್ನು, ಯುನೆಸ್ಕೊ ವಿಶ್ವ ಪರಂಪರೆಯ, ತಾತ್ಕಾಲಿಕ ತಾಣಗಳ ಪಟ್ಟಿಗೆ ಸೇರಿಸುವ, ಪ್ರಸ್ತಾವವನ್ನು, ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರ, ಸರ್ಕಾರದ ಅನುಮೋದನೆಯೊಂದಿಗೆ, ಭಾರತೀಯ ಪುರಾತತ್ವ ಸರ್ವೇಕ್ಷಣೆ ಇಲಾಖೆ ಮೂಲಕ, ಅಂತಾರಾಷ್ಟ್ರೀಯ ಸಮಿತಿಗೆ ಸದ್ಯದಲ್ಲೇ ಸಲ್ಲಿಸಲಾಗುವುದು ಎಂದು, ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ, ತಿಳಿಸಿದ್ದಾರೆ. ಲಕ್ಕುಂಡಿಯ ಪಾರಂಪರಿಕ ದೇಗುಲಗಳು, ಬಾವಿಗಳು ಸೇರಿದಂತೆ, ಒಟ್ಟು 6 ಸ್ಮಾರಕಗಳ ಸಂರಕ್ಷಣೆಗೆ, 10 ಕೋಟಿ 16 ಲಕ್ಷ ರೂಪಾಯಿ ಬಿಡುಗಡೆ ಮಾಡಲಾಗಿದೆ ಎಂದು, ಸುದ್ದಿ ಸಂಸ್ಥೆಗೆ ಅವರು ಮಾಹಿತಿ ನೀಡಿದ್ದಾರೆ. ಸಂರಕ್ಷಣಾ ಕಾಮಗಾರಿಯಲ್ಲಿ, ಲಕ್ಕುಂಡಿಯ, ಶ್ರೀ ವಿರೂಪಾಕ್ಷ ದೇವಾಲಯ, ಶ್ರೀ ಮಲ್ಲಿಕಾರ್ಜುನ ದೇವಾಲಯ ಹಾಗೂ ಗದ್ದುಗೆ, ಶ್ರೀ ಚಂದ್ರಮೌಳೇಶ್ವರ ದೇವಾಲಯ, ಶ್ರೀ ಹಾಲಗುಂಡಿ ಬಸವಣ್ಣ ದೇವಾಲಯ, ಕಣ್ಣರ ಬಾವಿ, ಕಲ್ಮಠ ಬಾವಿ ಹಾಗೂ ಆವರಣ ಗೋಡೆ ನಿರ್ಮಾಣ ಸೇರಿದೆ.

<><><>

ರಾಜ್ಯದ 5 ಸಾವಿರ ಸರ್ಕಾರಿ ಶಾಲೆಗಳಲ್ಲಿ, ಗಣಕಯಂತ್ರ ಬಳಸಿ, ಮಕ್ಕಳಿಗೆ ಶಿಕ್ಷಣ ನೀಡಲು, 160 ಕೋಟಿ ರೂಪಾಯಿ ನೀಡಲಾಗುತ್ತಿದೆ ಎಂದು, ಶಾಲಾ ಶಿಕ್ಷಣ ಖಾತೆ ಸಚಿವ ಮಧು ಬಂಗಾರಪ್ಪ ಶಿವಮೊಗ್ಗದಲ್ಲಿ ತಿಳಿಸಿದ್ದಾರೆ. ಸ್ಮಾರ್ಟ್ ತರಗತಿಗಳು ಹಾಗೂ ಗಣಕಯಂತ್ರ

ಹಾಗೂ ವಿಜ್ಞಾನ ಪ್ರಯೋಗಾಲಯಗಳ ಮೂಲಕ, ಕೌಶಲ ಆಧಾರಿತ ಶಿಕ್ಷಣ ನೀಡಲು, ರಾಜ್ಯ ಶಿಕ್ಷಣ ಇಲಾಖೆ ಯೋಜಿಸಿದೆ ಎಂದರು. ಮುಂಬರುವ ಶೈಕ್ಷಣಿಕ ವ ್ದಿಂದ, ಎಲ್.ಕೆ.ಜಿ. ಯಿಂದ, 12ನೇ ತರಗತಿ ವರೆಗೆ, ಉಚಿತ ಪಠ್ಯಪುಸ್ತಕಗಳನ್ನು ಒದಗಿಸಲಾಗುವುದು. ಉಚಿತವಾಗಿ ಬರೆಹದ ನೋಟ್ಸ್ ಪುಸ್ತಕಗಳನ್ನು ನೀಡುವ ಪ್ರಸ್ತಾವ, ತಮ್ಮ ಇಲಾಖೆ ಹೊಂದಿದೆ, ಎಂದು ಸಚಿವರು ಹೇಳಿದರು.

<><><>

ಬಾಗಲಕೋಟೆಯಲ್ಲಿ, ಸರ್ಕಾರಿ ವೈದ್ಯಕೀಯ ಮಹಾ ವಿದ್ಯಾಲಯದ ಶಂಕುಸ್ಥಾಪನೆಯನ್ನು, ಮುಖ್ಯಮಂತ್ರಿ ಸದ್ಯದಲ್ಲೇ ನೆರವೇರಿಸಲಿದ್ದಾರೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪೂರ ತಿಳಿಸಿದ್ದಾರೆ. ಜಿಲ್ಲಾ ಕ್ರೀಡಾಂಗಣದ ಸಭಾಂಗಣದಲ್ಲಿ ಮಾತನಾಡಿದ ಸಚಿವರು, ಕೃಷ್ಣ ಮೇಲ್ದಂಡೆ ಯೋಜನೆಯ, ಮುಳುಗಡೆ ಸಂತ್ರಸ್ತರ ಜಮೀನಿನ ಪರಿಹಾರ ವಿತರಣೆಗೆ, ಮುಖ್ಯಮಂತ್ರಿಗಳಿಗೆ ದಿನಾಂಕ ನಿಗದಿ ಪಡಿಸುವಂತೆ, ಮನವಿ ಮಾಡಲಾಗಿದೆ ಎಂದರು.

<><><>

ದಕ್ಷಿಣಕನ್ನಡ ಜಿಲ್ಲೆ, ಮಂಗಳೂರಿನ ಉಳ್ಳಾಲದಲ್ಲಿ, ನಾಡ ದೋಣಿ ಮತ್ತು ಗಿಲ್‌ನೆಟ್ ಮೀನುಗಾರರ ಸಂಘದ ವತಿಯಿಂದ, ಪ್ರಥಮ 'ಬೋಟ್ ಆಂಬ್ಯುಲೆನ್ಸ್' ಗೆ, ವಿಧಾನಸಭಾಧ್ಯಕ್ಷ ಯು.ಟಿ. ಖಾದರ ಚಾಲನೆ ನೀಡಿದರು. ಮೀನುಗಾರ ಸಂಘಟನೆ ರೂಪಿಸಿದ, ಈ ಯೋಜನೆ ಮಾದರಿಯಾಗಿದೆ. ತುರ್ತು ಸಂದರ್ಭಗಳಲ್ಲಿ, ಮೀನುಗಾರರ ಜೀವ ರಕ್ಷಣೆಗೆಂದೇ ರೂಪಿಸಲಾದ, ಬೋಟ್ ಆಂಬ್ಯುಲೆನ್ಸ್ ಸೇವೆ, ಮಹತ್ವದ ಕ್ರಮವಾಗಿದೆ ಎಂದು, ಖಾದರ ಶ್ಲಾಘಿಸಿದರು. ವಿಧಾನ ಪರಿ ತ್ ಶಾಸಕ, ಬಿ.ಎಂ. ಫಾರೂಕ್ ಮಾತನಾಡಿ, ದೋಣಿ ರುಗ್ಣ ವಾಹನ, ಸಮುದ್ರದಲ್ಲಿ ಅಪಾಯಕ್ಕೆ ಸಿಲುಕಿದವರ ರಕ್ಷಣಾ ಕಾರ್ಯಕ್ಕೆ, ಸಹಕಾರಿಯಾಗಲಿದೆ ಎಂದರು.

<><><>

ಉಡುಪಿ ಜಿಲ್ಲೆ, ಕೋಡಿ ಬೇಂಗ್ರೆಯ ಡೆಲ್ಟಾ ಬಂದರು ಬಳಿ, ಪ್ರವಾಸಿ ದೋಣಿಯೊಂದು ಸಮುದ್ರದಲ್ಲಿ ಮಗುಚಿ, ತೀವ್ರವಾಗಿ ಅಸ್ವಸ್ಥಗೊಂಡ ನಾಲ್ವರ ಪೈಕಿ, ಇಬ್ಬರು ಪ್ರವಾಸಿಗರು, ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಚಾಮರಾಜನಗರ ಜಿಲ್ಲೆ ಹರವೆ ಗ್ರಾಮದ 22 ವರ್ಷ ವಯಸ್ಸಿನ ಶಂಕರಪ್ಪ ಹಾಗೂ ಮೂಗೂರು ಗ್ರಾಮದ 23 ವರ್ಷ ವಯಸ್ಸಿನ ಸಿಂಧು ಮೃತಪಟ್ಟ ದುರ್ದೈವಿಗಳು, 26 ವರ್ಷ ವಯಸ್ಸಿನ ದಿಶಾ ಅವರ ಸ್ಥಿತಿ ಗಂಭೀರವಾಗಿದ್ದು, ಚಿಕಿತ್ಸೆ ನೀಡಲಾಗುತ್ತಿದೆ. ಧರ್ಮರಾಜ್ ಎಂಬವರು ಚಿಕಿತ್ಸೆಗೆ ಸ್ಪಂದಿಸಿದ್ದು, ಆರೋಗ್ಯ ಸ್ಥಿತಿ ಸ್ಥಿರವಾಗಿದೆ. ಒಟ್ಟು 14 ಜನ ಪ್ರವಾಸಿಗರು, ದೋಣಿಯಲ್ಲಿ ಸಮುದ್ರಕ್ಕೆ ವಿಹಾರಕ್ಕೆಂದು ಹೋಗಿದ್ದ ಸಂಸದರ್ಭದಲ್ಲಿ, ಕೆಲವರು ಲೈಫ್ ಜಾಕೆಟ್ ಧರಿಸಿರಲಿಲ್ಲ ಎನ್ನಲಾಗಿದೆ. ತನಿಖೆ ಮುಂದುವರೆದಿದೆ.

<><><>

ವಾರದಲ್ಲಿ ಐದು ದಿನಗಳ ಕರ್ತವ್ಯ ನಿರ್ವಹಣೆ ವ್ಯವಸ್ಥೆ, ತಕ್ಷಣ ಜಾರಿಗೊಳಿಸಬೇಕು ಎಂದು ಒತ್ತಾಯಿಸಿ, ರಾಷ್ಟ್ರೀಕೃತ ಬ್ಯಾಂಕ್‌ಗಳ ನೌಕರರು, ಇಂದು ರಾಷ್ಟ್ರವ್ಯಾಪಿ ಮುಷ್ಕರ ಕೈಗೊಳ್ಳಲಿದ್ದಾರೆ. ಗ್ರಾಹಕರ ಸೇವೆಗಳಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆ ಇದೆ.

<><><>

ಮತದಾರರ ನೋಂದಣಿ ಹಾಗೂ ಪಟ್ಟಿಯ ಪರಿಷ್ಕರಣೆಯಲ್ಲಿ, ವಿಶೇಷ ಸಾಧನೆ ಗೈದ, ಧಾರವಾಡ ಜಿಲ್ಲಾ ಪಂಚಾಯಿತಿ, ಉಪ ಕಾರ್ಯದರ್ಶಿ, ಮಲ್ಲಿಕಾರ್ಜುನ ತೊದಲಬಾಗಿ ಅವರಿಗೆ, ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರು, ರಾಜ್ಯ ಪ್ರಶಸ್ತಿ ನೀಡಿ, ಅಭಿನಂದಿಸಿದ್ದಾರೆ. ಬೆಂಗಳೂರಿನ, ಪುಟ್ಟಣ್ಣ ಚೆಟ್ಟಿ ಪುರ ಭವನದಲ್ಲಿ ಜರುಗಿದ, ರಾಜ್ಯ ಮತದಾರರ ದಿನಾಚರಣೆ ಕಾರ್ಯಕ್ರಮದಲ್ಲಿ, ಮಲ್ಲಿಕಾರ್ಜುನ ತೊದಲಬಾಗಿ, ಪ್ರಶಸ್ತಿ ಸ್ವೀಕರಿಸಿದರು. ಅವರು ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಮಲ್ಲಿಕಾರ್ಜುನ ತೊದಲಬಾಗಿ ಧ್ವನಿ 24 ಸೆಕೆಂದುಗಳು

<><><>

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(40 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಬೇಡ್ತಿ ಹಾಗೂ ವರದಾ ನದಿಗಳ, ಜೋಡಣೆಯ ಅಗತ್ಯತೆ ಕುರಿತು, ಹಾವೇರಿಯ ಶ್ರೀ ಹುಕ್ಕೇರಿಮಠದ ಶ್ರೀ ಸದಾಶಿವ ಸ್ವಾಮೀಜಿಗಳ ನೇತೃತ್ವದಲ್ಲಿ, ನಿಯೋಗದೊಂದಿಗೆ, ಮುಖ್ಯಮಂತ್ರಿ ಹಾಗೂ ಜಲ ಸಂಪನ್ಮೂಲ ಖಾತೆ ಸಚಿವರನ್ನು ಭೇಟಿ ಮಾಡಿ, ಮನವಿ ಸಲ್ಲಿಸುವುದಾಗಿ, ಹಾವೇರಿ ಸಂಸದ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಹಾವೇರಿಯಲ್ಲಿ ಮಾತನಾಡಿದ ಅವರು, ಕೇಂದ್ರ ಜಲಶಕ್ತಿ ಖಾತೆ ಸಚಿವರ ಬಳಿ ಸಹ, ನಿಯೋಗ ತೆರಳಲಿದೆ. ಬಳಿಕ, ಮಾರ್ಚ್ ಹಾಗೂ ಏಪ್ರಿಲ್ ತಿಂಗಳಿನಲ್ಲಿ, ಜಿಲ್ಲೆಯ ಪ್ರತಿ ಗ್ರಾಮದಲ್ಲಿ, ಯೋಜನೆಯ ಕುರಿತು, ಜನ ಜಾಗೃತಿ ಸಭೆ ನಡೆಯಲಿವೆ ಎಂದರು.

<><><>

ದೇಶದಲ್ಲಿಯೇ ಮೊದಲ ಪ್ರಯತ್ನವಾಗಿ, ಜನರಿಂದ, ಜನರಿಗಾಗಿ, ಜನರಿಗೋಸ್ಕರ ಧ್ಯೇಯದೊಂದಿಗೆ, ಕಲಬುರಗಿ ಜಿಲ್ಲೆಯ, ಸರ್ವತೋಮುಖ ಅಭಿವೃದ್ಧಿಗಾಗಿ, ರಾಜ್ಯ ಸರ್ಕಾರ, ಕಲಬುರಗಿ ನೆಕ್ಸ್ಟ್ ಫೌಂಡೇಶನ್ ಟ್ರಸ್ಟ್ ಸ್ಥಾಪಿಸಿದೆ. ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ ಖರ್ಗೆ, ಕಲಬುರಗಿಯ ಝುಸ್ಟ್ ಕ್ಲಬ್‌ನಲ್ಲಿ, ನೆಕ್ಸ್ಟ್ ಫೌಂಡೇಶನ್ ಲಾಂಛನ ಬಿಡುಗಡೆಗೊಳಿಸಿ, ಮಾತನಾಡಿದರು. ಸಮುದಾಯದ ತೊಡಗಿಸಿಕೊಳ್ಳುವಿಕೆ ಖಾತ್ರಿ ಪಡಿಸಿ, ಸಂಘ, ಸಂಸ್ಥೆ, ಹಾಗೂ ಖಾಸಗಿ ಕಂಪೆನಿಗಳು, ಜಿಲ್ಲೆಯ ಅಭಿವೃದ್ಧಿಗಾಗಿ, ದೇಣಿಗೆ ನೀಡಿ, ಅಗತ್ಯಕ್ಕೆ ಅನುಗುಣವಾಗಿ ಕ್ರಿಯಾ ಯೋಜನೆ ಸಿದ್ಧ ಪಡಿಸಿ, ಟ್ರಸ್ಟ್ ಮೂಲಕ ಅನುಷ್ಟಾನಗೊಳಿಸಲು, ಯೋಜಿಸಲಾಗಿದೆ ಎಂದರು.

<><><>

2026 ನೇ ಸಾಲಿನ, ಪದ್ಮಶ್ರೀ ಪ್ರಶಸ್ತಿಗೆ, ದಾವಣಗೆರೆಯ ಜಗದ್ಗುರು ಶ್ರೀ ಜಯದೇವ ಮುರುಘರಾಜೇಂದ್ರ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಧ್ಯಾಪಕ, ಡಾಕ್ಟರ್ ಸುರೇಶ ಹನಗವಾಡಿ, ಆಯ್ಕೆಯಾಗಿದ್ದಾರೆ. ಸಹಸ್ರಾರು ಹಿಮೋಫಿಲಿಯಾ, ಕುಸುಮ ರೋಗದ, ಆರೋಗ್ಯಾಕಾಂಕ್ಷಿಗಳಿಗೆ ಉಚಿತ ಜೌ ‘ಧಿ, ನಿರಂತರ ರಕ್ತ ಒದಗಿಸುವಿಕೆ ಹಾಗೂ ಸಕಾಲಿಕವಾಗಿ, ನೆರವಿನ ಹಸ್ತ ಚಾಚಲು, ಕರ್ನಾಟಕ ಹಿಮೋಫಿಲಿಯಾ ಸೊಸೈಟಿ ಎಂಬ ಮಾದರಿ ಸಂಸ್ಥೆ ಸ್ಥಾಪಿಸಿ, ರಾಷ್ಟ್ರದ ಗಮನ ಸೆಳೆದಿದ್ದಾರೆ.

ಪ್ರದೇಶ ಸಮಾಚಾರಕ್ಕಾಗಿ, ಡಾಕ್ಟರ್ ಸುರೇಶ ಹನಗವಾಡಿ, ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಸುರೇಶ ಹನಗವಾಡಿ ಧ್ವನಿ– 53 ಸೆಕೆಂದುಗಳು

<><><>

ಮಹಾತ್ಮ ಗಾಂಧಿ, ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ, ಮರು ಜಾರಿಗೆ ಒತ್ತಾಯಿಸಿ, ಕಾಂಗ್ರೆಸ್ ಪಕ್ಷ, ಇಂದು ಲೋಕ ಭವನ ಚಲೋ ಆಯೋಜಿಸಿದೆ. ರಾಜ್ಯದ ಎಲ್ಲ ಜಿಲ್ಲೆಗಳ, ಪ್ರತಿ ತಾಲೂಕಿನಲ್ಲೂ, ಐದು ಕಿಲೋ ಮೀಟರ್ ಪಾದಯಾತ್ರೆ, ಕಾಂಗ್ರೆಸ್ ಕಾರ್ಯಕರ್ತರು, ಮನರೇಗಾ ಮರು ಜಾರಿಗೆ ಒತ್ತಾಯಿಸಿ, ನಡೆಸಲಿದ್ದಾರೆ ಎಂದು, ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ, ಬೆಂಗಳೂರಿನಲ್ಲಿ ತಿಳಿಸಿದ್ದಾರೆ. ಮಹಾತ್ಮ ಗಾಂಧಿ ಅವರ ಹೆಸರಿನಲ್ಲಿ ಆರಂಭವಾದ ಯೋಜನೆಯನ್ನು, ಕೇಂದ್ರ ರದ್ದು ಪಡಿಸಿದೆ. ಮರು ಜಾರಿಗೆ ಒತ್ತಾಯಿಸಿ, ಕಾಂಗ್ರೆಸ್ ದೇಶಾದ್ಯಂತ, ಹೋರಾಟ ಕೈಗೊಂಡಿದೆ ಎಂದರು.

<><><>

ಹಾಸನ ಜಿಲ್ಲೆ, ಆಲೂಗಡ್ಡೆ ಬೆಳೆಗೆ, ದೇಶದಲ್ಲೇ ಹೆಸರುವಾಸಿ. ಕಳೆದ ಒಂದು ದಶಕದಲ್ಲಿ, ಆಲೂಗಡ್ಡೆ ಬೆಳೆ ಕಡಿಮೆ ಆಗಿರುವ ಹಿನ್ನೆಲೆ, ಉತ್ತೇಜನ ನೀಡಲು, ಆಲೂಗಡ್ಡೆ ಮೇಳ ಆಯೋಜಿಸಲಾಗಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ, ಕೃ ್ಣ ಬೈರೇಗೌಡ ತಿಳಿಸಿದ್ದಾರೆ. ತೋಟಗಾರಿಕೆ ಇಲಾಖೆ ಆಯೋಜಿಸಿದ, ಆಲೂಗಡ್ಡೆ ಮೇಳ ಹಾಗೂ ಕೃಷಿ ಇಲಾಖೆ ವತಿಯಿಂದ, ಸಿರಿಧಾನ್ಯ ಹಬ್ಬಕ್ಕೆ ಚಾಲನೆ ನೀಡಿ, ಮಾತನಾಡಿದರು. ಆಲೂಗಡ್ಡೆ ಮೇಳದ ಮೂಲಕ, ಕೃಷಿ ತಂತ್ರಜ್ಞಾನ ಮತ್ತು ಮೌಲ್ಯವರ್ಧನೆ ಬಗ್ಗೆ, ಮಾಹಿತಿ ನೀಡಲಾಗುತ್ತಿದೆ ಎಂದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ಗದಗ ಜಿಲ್ಲೆ, ಲಕ್ಕುಂಡಿ ಸ್ಮಾರಕಗಳು; ಯುನೆಸ್ಕೊ ವಿಶ್ವ ಪರಂಪರೆಯ, ತಾತ್ಕಾಲಿಕ ಪಟ್ಟಿಗೆ ಸೇರಿಸುವ, ಪ್ರಸ್ತಾವ.

ರಾಜ್ಯದ 5 ಸಾವಿರ ಸರ್ಕಾರಿ ಶಾಲೆಗಳು, ಸ್ಮಾರ್ಟ್ ತರಗತಿಗಳ ಸೌಲಭ್ಯದ ಮೂಲಕ, ಮೇಲ್ದರ್ಜೆಗೆ.

ಬೇಡ್ತಿ ಹಾಗೂ ವರದಾ ನದಿಗಳ, ಜೋಡಣೆ; ಹುಕ್ಕೇರಿಮಠದ ಶ್ರೀಗಳ ನೇತೃತ್ವದಲ್ಲಿ, ಹಾವೇರಿಯಿಂದ ಕೇಂದ್ರಕ್ಕೆ ನಿಯೋಗ.

ಕಲಬುರಗಿ ಅಭಿವೃದ್ಧಿಗೆ, ದೇಶದಲ್ಲೇ ವಿನೂತನ, ಜನ ಸಹಭಾಗಿತ್ವದ, ನೆಕ್ಸ್ಟ್ ಫೌಂಡೇಶನ್, ಸ್ಥಾಪನೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>